# ಪಿಂಕಿಯ ದೀಪಾವಳಿ

ಹಬ್ಬಗಳಲ್ಲಿ ದೀಪಾವಳಿಯು
ಪಿಂಕಿಗೆ ಬಲು ಇಷ್ಟ
ಆದರೆ ಅವಳಿಗೆ ಭಯವೆನಿಸುವುದು
ಕೇಳಲು ಪಟಾಕಿ ಸ್ಫೋಟ

ಅಪ್ಪನ ಎದುರು ಅತ್ತು ಕರೆದು
ಪಿಂಕಿಯು ನಿನ್ನೆ ದಿನ
ಅಣ್ಣಗೆ ಪಟಾಕಿ ಕೊಡಿಸೆನು ಎಂದು
ಪಡಕೊಂಡಳು ವಾಗ್ದಾನ

ಆದರೆ ಈ ದಿನ ನಡೆದುದೆ ಬೇರೆ
ಕೀಟಲೆ ಮಾಡುತ ಪುಟ್ಟ
ಬೆಳಗಾಗುತ್ತಲೇ ಗೆಳೆಯರ ಕೂಡಿ
ನಡೆದ ಪೇಟೆಯತ್ತ

ಲಕ್ಷ್ಮಿ ಪಟಾಕಿ ಅಣ್ಣನು ತಂದನು
ಪಿಂಕಿ ಓಡಿದಳು ಹೆದರಿ
ತನ್ನೆದುರಲ್ಲೇ ಪಟಾಕಿ ಸಿಡಿಸಲು
ಬೆಚ್ಚಿಬಿದ್ದಳು ಹೌಹಾರಿ

ಪಟಾಕಿ ಹಚ್ಚಲು ಕಿವಿಯ ಭೇದಿಸುವ
ಢಂ ಢಂ ಸ್ಫೋಟದ ಸದ್ದು
ಕಣ್ಮುಚ್ಚಿದರೂ ಮಿಂಚಿನ ಬೆಳಕು
ಹೊಮ್ಮಿಸೋ ಸಿಡಿಮದ್ದು

ಬೆದರಿದ ಪಿಂಕಿ ಅತ್ತಳು ಚೀರಿ
ಅಣ್ಣನೆ ಬಂದನು ಓಡೋಡಿ
ಯಾಕೇ ಕೂಗಿದೆ ಹೆದರಿಕೆ ಕನಸಾ ?
ಎನ್ನುತ ಕೇಳಿದ ತಲೆಸವರಿ

ತಾ ಕಂಡದ್ದು ಕನಸೆಂದರಿತು
ಪಿಂಕಿಗೆ ನಗುಬಂತು
ಪಟಾಕಿ ಇಲ್ಲದೆ ಹಬ್ಬ ಆಚರಿಸುವ
ಅಣ್ಣನಿಗಿತ್ತಳು ಹೂಮುತ್ತು

■ ನಾಗೇಶ ಜಿ. ವೈದ್ಯ


ಶಿಲ್ಪಾ ಕಬ್ಬಿನಕಂತಿ

# ತಾರಸಿ ತೋಟ

ಇತ್ತಕಡೆ ಹಸಿರ ರಾಶಿ
ಅತ್ತಕಡೆ ಜಲದರಾಶಿ
ಕಾಣಿಸುವುದು ಹತ್ತಿದರೆ
ನಮ್ಮ ಮನೆಯ ತಾರಸಿ

ದೂರದಲ್ಲಿ ಬೆಟ್ಟಗುಡ್ಡ
ಚಾಚಿಕೊಂಡು ಮುಗಿಲಿನತ್ತ
ಕಣ್ಣು ಮನ ಸೆಳೆಯುವವು
ಚಿತ್ತಾರ ಬಿಡಿಸಿದಂಥ ನೋಟ

ಅರಳೆ ಉಂಡೆ ಹಿಂಜಿದಂತೆ
ನೀಲಗಗನದಲ್ಲಿ ಮೋಡ
ಮೊಲದ ಹಿಂಡು ಓಡುವಂತೆ
ತೇಲುತಿರುವ ಸೊಬಗ ನೋಡ

ಸುತ್ತಮುತ್ತ ಗಿಡಮರಗಳು
ತುಂಬಿಕೊಂಡು ಹೂಗೊಂಚಲು
ಹಾರಿ ಹಾರಿ ಬರುವವು
ಹಕ್ಕಿಗಳು ಸಾಲುಸಾಲು

ರೆಂಬೆಕೊಂಬೆ ನಡುವಿನಿಂದ
ತೂರಿಬರುವ ಕುಹೂಗಾನ
ಮುಂಜಾನೆಯ ಎಳೆಬಿಸಿಲಲಿ
ಮುತ್ತಿಕ್ಕುವವು ಸೂರ್ಯಕಿರಣ

ಪುಟ್ಟ ಪುಟ್ಟ ಕುಂಡಗಳಲಿ
ಅರಳಿ ನಿಂತ ಹೂವುಗಳು
ಮಧುವ ಹೀರಲೆಂದು ಸುತ್ತ
ಮುತ್ತುತ್ತಿರುವ ದುಂಬಿಗಳು

ಬೆಂಡೆ ಬದನೆ ಹೀರೆ ಸೋರೆ
ಹುರುಳಿ ಸೌತೆ ನುಗ್ಗೆ ಕೋಸು
ದಂಟು ಹರಿವೆ ಮೆಂತೆ ಸೊಪ್ಪು
ನಾವೇ ಬೆಳೆದು ತಿನ್ನಲು ಸೊಗಸು

ಮೈಗೂ ಮನಕೂ ಹರುಷ ತರುವ
ತಾರಸಿಯ ತೋಟ ಚೆಂದ
ನಡುವೆ ಕುಳಿತು ಬೆಳದಿಂಗಳ
ಊಟವದುವೇ ಪರಮಾನಂದ!

■ ಡಾ. ಕೆ.ಬಿ. ರಂಗಸ್ವಾಮಿ


ಶಿಲ್ಪಾ ಕಬ್ಬಿನಕಂತಿ